

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

**ಪ್ರ** ವಿವಾಹಿತೆ. ಒಂಬತ್ತು ವರ್ಷಗಳ ಮುಂಚೆ ಪ್ರೇಮಪ್ರಕರಣದಲ್ಲಿ ಒಬ್ಬ ಹುಡುಗನಿಗೆ ಸರ್ವಸ್ವವನ್ನೂ ಅರ್ಪಿಸಿಕೊಂಡೆ. ನಂತರ ಆತನಿಗೆ ಮೊದಲೇ ಮದುವೆಯಾಗಿದೆ ಎಂದು ಗೊತ್ತಾಗಿ ಅವನನ್ನು ತ್ಯಜಿಸಿದೆ. ಈಗ ನಾನು ಮದುವೆಯಾಗಿ ಎರಡು ವರ್ಷಗಳಾಗಿವೆ. ಗಂಡ ಒಳ್ಳೆಯವರು. ಗರ್ಭಿಣಿಯಾಗಿ ತಪಾಸಣೆಗೆಂದು ವೈದ್ಯರ ಬಳಿ ಹೋದಾಗ ರಕ್ತಪರೀಕ್ಷೆಯಲ್ಲಿ ಎಚ್‌ಐವಿ ಪಾಸಿಟಿವ್ ಎಂದಿತ್ತು. ಗುಟ್ಟಾಗಿ ಗರ್ಭಪಾತ ಮಾಡಿಸಿದೆ. ಇದ್ಯಾವುದನ್ನೂ ಗಂಡನಿಗೆ ತಿಳಿಸಿರುವುದಿಲ್ಲ. ನಾನೊಬ್ಬಳೇ ನೋವನ್ನು ಅನುಭವಿಸುತ್ತಿದ್ದೇನೆ. ಮಕ್ಕಳೆಂದರೆ ಪತಿಗೆ ಪಂಚಪ್ರಾಣ. ಹೀಗಾಗಿ ವೈದ್ಯರಲ್ಲಿಗೆ ಹೋಗೋಣ ಎನ್ನುವಾಗ ನನಗೆ ಭಯವಾಗುತ್ತದೆ. ಇದನ್ನು ಹೇಗೆ ನಿರ್ವಹಿಸುವುದು ಎಂದು ತಿಳಿಯುತ್ತಿಲ್ಲ. ನನಗಿರುವ ಈ ರೋಗ ಮಗುವಿಗೆ ಬಾರದಂತೆ ತಡೆಯಲು ಯಾವ ವೈದ್ಯರನ್ನು ಕಾಣಬೇಕು? ಈ ರೋಗಕ್ಕೆ ಔಷಧಿ ಇದೆಯೆ? ಸಾಯಬೇಕೆನಿಸುತ್ತದೆ; ಸತ್ತರೆ ಪತಿ ಇನ್ನೊಬ್ಬಳನ್ನು ಮದುವೆಯಾದರೆ ಅವಳಿಗೂ ಹರಡುತ್ತದೆ. ಮಾರ್ಗ ತೋರಿಸಿ.

ನಿಜಕ್ಕೂ ನಿಮ್ಮ ಕಥೆ ಕರುಳು ಕತ್ತರಿಸುವಂತಿದೆ! ಹೀಗಿದ್ದರೂ ಆಧುನಿಕ ವೈದ್ಯಕೀಯ ದೃಷ್ಟಿಯಿಂದ ಯೋಚಿಸಿದಾಗ ನಿಮ್ಮ ವಿಚಾರಧಾರೆಯಲ್ಲಿ ಎರಡು ದೋಷಗಳು ಕಂಡುಬರುತ್ತವೆ. ಒಂದು, ನಿಮಗಾಗಲೀ ಪತಿಗಾಗಲೀ ಎಚ್‌ಐವಿ ಅಂಟಿರುವುದನ್ನು ಖಚಿತಪಡಿಸಿಕೊಂಡೇ ಇಲ್ಲವಲ್ಲ? ಯಾಕೆಂದರೆ ಪ್ರಾಥಮಿಕ ಪರೀಕ್ಷೆಯಲ್ಲಿ ಎಚ್‌ಐವಿ ಸೋಂಕು ಕಂಡುಬಂದಿರುವ ವ್ಯಕ್ತಿಗಳೆಲ್ಲರೂ ಇನ್ನೊಂದು ನಿಖರವಾದ ಪರೀಕ್ಷೆಗೆ (ಉದಾ. ವೆಸ್ಟರ್ನ್ ಬ್ಲಾಟ್ ಪರೀಕ್ಷೆ, ಪಿ24 ಆ್ಯಂಟಿಜನ್, ಎಚ್‌ಐವಿ ಡಿಎನ್‌ಎ ಪಿಸಿಆರ್) ಒಳಪಟ್ಟಾಗ ಹಲವರಲ್ಲಿ ಸೋಂಕು ಇಲ್ಲವೆಂದು ಕಂಡುಬಂದಿದೆ. ಎರಡು, ಸೋಂಕಿರುವ ಸಂಗಾತಿಯ ಜೊತೆಗೆ ಸತತವಾದ ಸಂಪರ್ಕ ಇಟ್ಟುಕೊಂಡ ಹಲವರಿಗೆ ಇದು ಹರಡಿಲ್ಲ. ಹೀಗಾಗಿ ನಿಮಗಾಗಲೀ ಪತಿಗಾಗಲೀ ಎಚ್‌ಐವಿ ಇದ್ದೇ ಇದೆಯೆಂದು ಖಚಿತವಾಗಿ ಹೇಳುವುದು ಈ ಹಂತದಲ್ಲಿ ಸಾಧ್ಯವಿಲ್ಲ. ಆದುದರಿಂದ ಹೀಗೆ ಮಾಡಿ: ಹೇಗಿದ್ದರೂ ಪತಿಗೆ ಮಗು ಬೇಕಿದೆಯಲ್ಲವೆ? ಇದೇ ಕಾರಣವನ್ನು ಮುಂದಿಟ್ಟುಕೊಂಡು ನೀವಿಬ್ಬರೂ ಜೊತೆಯಾಗಿ ವೈದ್ಯರನ್ನು ಭೇಟಿಮಾಡಿ. ಆಗ ಇಬ್ಬರ ಎಚ್‌ಐವಿ ಪರೀಕ್ಷೆಯನ್ನು ಮಾಡಲಾಗುವುದು. ಆಗ ಫಲಿತಾಂಶದಲ್ಲಿ ಈ ಮೂರು ಸಾಧ್ಯತೆಗಳಲ್ಲಿ ಒಂದು ಕಂಡುಬರಬಹುದು. ಅ) ನಿಮ್ಮಿಬ್ಬರಿಗೂ ಎಚ್‌ಐವಿ ಇರಲಿಕ್ಕಿಲ್ಲ. ಆಗ ನಿಮ್ಮ ಸಮಸ್ಯೆಯೇ ಬಗೆಹರಿಯುತ್ತದೆ! ಆ) ಇಬ್ಬರಿಗೂ ಎಚ್‌ಐವಿ ಎಂದು ಕಂಡುಬಂದರೆ ಮಕ್ಕಳೇ ಬೇಡವೆಂದು ಒಮ್ಮತದಿಂದ ನಿರ್ಧರಿಸಿ, ಮುಂದಿನ ಜೀವನವನ್ನು ಮಾರ್ಪಾಡು ಮಾಡಿಕೊಳ್ಳಬಹುದು (ಉದಾ. ಮಗುವನ್ನು ದತ್ತು ತೆಗೆದುಕೊಳ್ಳುವುದು). ಇ) ನಿಮಗೆ ಎಚ್‌ಐವಿ ಇದ್ದು ಪತಿಗೆ ಇಲ್ಲವೆಂದಾದರೆ ಇನ್ನು ಮುಂದಿನ ಪ್ರತಿ ಸಂಭೋಗದಲ್ಲೂ ಎಚ್ಚರಿಕೆಯಿಂದ ಕಾಂಡೋಮ್ ಬಳಸಲೇಬೇಕು. (ಇಲ್ಲೊಂದು ನಾಲ್ಕನೆಯ ಸಾಧ್ಯತೆಯೂ ಇದೆ: ಒಂಬತ್ತು ವರ್ಷಗಳಷ್ಟು ಹಿಂದೆ ಎಚ್‌ಐವಿ ಈಗಿನಷ್ಟು ವ್ಯಾಪಕವಾಗಿರಲಿಲ್ಲ, ಮತ್ತು ಪ್ರೇಮಿಗಳ ಸಂಭೋಗ ಸಂಬಂಧವು ಪತಿಪತ್ನಿಯರ ಮಧ್ಯೆ ನಡೆಯುವಷ್ಟು ಹೆಚ್ಚಿಗಿರುವುದಿಲ್ಲ ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಂಡಾಗ ಎಚ್‌ಐವಿ ಸೋಂಕು ಪತಿಯಿಂದಲೂ ಬಂದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.) ಇಷ್ಟಿದ್ದರೂ ಎಚ್‌ಐವಿ ಸೋಂಕು ಇರುವವರು ಗರ್ಭಧರಿಸಲು ಮತ್ತು ನಿರೋಗಿ ಮಗುವನ್ನು ಪಡೆಯಲು ಖಂಡಿತವಾಗಿಯೂ ಸಾಧ್ಯವಿದೆ! ಇದಕ್ಕಾಗಿ ಹತ್ತಿರದ ವಿ.ಸಿ.ಟಿ.ಸಿ. ಕೇಂದ್ರವನ್ನಾಗಲೀ, ಅಥವಾ ಕುಟುಂಬ ಕಲ್ಯಾಣ ಇಲಾಖೆಯ ಆಸ್ಪತ್ರೆಯನ್ನಾಗಲೀ ಸಂಪರ್ಕಿಸಬಹುದು. ಆದುದರಿಂದ ನಿರಾಸೆ– ಚಿಂತೆಗಳನ್ನು ಕೊಡವಿಕೊಂಡು ಎದ್ದು ಕಾರ್ಯಪ್ರವೃತ್ತರಾಗಿ! ಕೊನೆಯ ಮಾತು: ಈಗಿನ ಕಾಲದಲ್ಲಿ ವಿವಾಹಪೂರ್ವ ಹುಡುಗ ಹುಡುಗಿ ಇಬ್ಬರೂ ಎಚ್‌ಐವಿ ಪರೀಕ್ಷೆ ಮಾಡಿಸಿಕೊಳ್ಳುವುದು ಜಾತಕ ನೋಡುವುದಕ್ಕಿಂತಲೂ ಹೆಚ್ಚು ಮಹತ್ವದ್ದು!

**ಪ್ರ** ನನಗೆ 33 ವರ್ಷ, ಗಂಡನಿಗೆ 42ವರ್ಷ. ನಮಗೆ 11ಮತ್ತು 8 ವರ್ಷದ ಗಂಡು ಮಕ್ಕಳಿದ್ದಾರೆ. ನನ್ನ, ನನ್ನ ಪತಿಯ, ತಂದೆ– ತಾಯಿಯರ, ಮಾವನ ಹಾಗೂ ಮೊದಲ ಮಗನ ರಕ್ತದ ಗುಂಪು ಎ ಪಾಸಿಟಿವ್. (ಅತ್ತೆಯ ರಕ್ತದ ಗುಂಪು ಗೊತ್ತಿಲ್ಲ.) ಆದರೆ ನನ್ನ ಎರಡನೆಯ ಮಗನದು ಒ ಪಾಸಿಟಿವ್. ಈ ರೀತಿ ಆಗಲು ಸಾಧ್ಯವೆ? ಅಪ್ಪ–ಅಮ್ಮನ ರಕ್ತದ ಗುಂಪು ಒಂದೇ ಆಗಿದ್ದರೆ ಮಕ್ಕಳಲ್ಲೂ ಅದೇ ರಕ್ತದ ಗುಂಪು ಇರುತ್ತದೆ ಎಂದು ಓದಿದ್ದೇನೆ. ಇದರಿಂದ ನನಗೆ ಹೆರಿಗೆಯಲ್ಲಿ ಮಗು ಬದಲಾಗಿದೆ ಎಂಬ ಆತಂಕ. ಡಿಎನ್‌ಎ ಪರೀಕ್ಷೆಯಿಂದ ಮಾಹಿತಿ ದೊರಕುವುದೆ? ಅಲ್ಲದೆ ನಾನು ಎರಡನೇ ಸಲ ಗರ್ಭವತಿಯಾಗಿದ್ದಾಗ ರಕ್ತ ಕಡಿಮೆ ಇದೆಯೆಂದು ಒಂದು ಕೋರ್ಸ್ ರಕ್ತ ಹೆಚ್ಚುವ ಇಂಜೆಕ್ಷನ್ ಕೊಡಲಾಗಿತ್ತು. ದಯವಿಟ್ಟು ಪರಿಹಾರ ತಿಳಿಸಿ.

ರಕ್ತ ಹೆಚ್ಚಾಗುವ ಇಂಜಕ್ಷನ್ ಒತ್ತಟ್ಟಿಗಿರಲಿ, ರಕ್ತವನ್ನೇ ದಾನವಾಗಿ ತೆಗೆದುಕೊಂಡರೂ ರಕ್ತದ ಗುಂಪು ಬದಲಾವಣೆ ಹೊಂದುವುದಿಲ್ಲ. ಇಲ್ಲಿ ನಿಮ್ಮ ಪತಿಯ ಅಥವಾ ಸಂಬಂಧಿಕರ ರಕ್ತಪರೀಕ್ಷೆಯ ವರದಿ ತಪ್ಪಾಗಿರಲೂ ಸಾಧ್ಯವಿದೆ. ರಕ್ತದ ಗುಂಪನ್ನು ನಿಖರವಾಗಿ ತಿಳಿಯಲು ಖ್ಯಾತ ಪ್ರಯೋಗಾಲಯದಲ್ಲಿ ನಿಮ್ಮೆಲ್ಲರ– ಅಂದರೆ ನಿಮ್ಮ ಅಪ್ಪ–ಅಮ್ಮ, ಅತ್ತೆ– ಮಾವ, ನೀವಿಬ್ಬರು ಮತ್ತು ನಿಮ್ಮ ಎರಡೂ ಮಕ್ಕಳು– ಕೆಂಪು ರಕ್ತ ಕಣಗಳನ್ನು ಚೆನ್ನಾಗಿ ತೊಳೆದು ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ. ಆಗಲೂ ಕೂಡ ಒಂದು ವೇಳೆ ಮುಂಚಿನ ಫಲಿತಾಂಶವೇ ಕಂಡುಬಂದಲ್ಲಿ ನಿಮ್ಮ ಮಗ ನಿಮ್ಮ ಸಂತಾನವೇ ಆಗುತ್ತಾನೆ. ಯಾಕೆಂದರೆ ರಕ್ತದ ಗುಂಪುಗಳು ವಾಸ್ತವವಾಗಿ ಆರು. (ಸಾಮಾನ್ಯ ಮಾಹಿತಿಯಂತೆ ನಾಲ್ಕಲ್ಲ) ಇವುಗಳು ಒಎ, ಒಬಿ, ಎ, ಬಿ, ಎಬಿ ಮತ್ತು ಒ. ಇವೆಲ್ಲವೂ ಪಾಸಿಟಿವ್ ಅಥವಾ ನೆಗೆಟಿವ್ ಆಗಿರಬಹುದು. ನಿಮ್ಮಿಬ್ಬರ ಎ ಗುಂಪಿನ ರಕ್ತದಲ್ಲಿ ಆರನೆಯ ಒಂದಂಶ ಒ ಆಗಿರಲು ಸಾಧ್ಯವಿದೆ. ನಿಮ್ಮಿಬ್ಬರ ಒ ಅಂಶವು ನಿಮ್ಮ ಮಗನಲ್ಲಿ ಸೇರಿ ಅವನದು ಒ ಗುಂಪಾಗಿ ಪ್ರಕಟವಾಗಲು ಸಾಧ್ಯವಿದೆ. ಹೀಗಾಗಿ ಇದರಲ್ಲಿ ಅಸಹಜವಾದುದು ಏನೂ ಇಲ್ಲ. ಒಂದು ವೇಳೆ ಆಸ್ಪತ್ರೆಯಲ್ಲಿ ಮಗು ಬದಲಾಗಿದ್ದರೆ ಈಗ ಮರುಬದಲಾವಣೆಗೆ ಪ್ರಯತ್ನಿಸುವ ಹಾಗಿದ್ದೀರಾ? ಅಲ್ಲದೆ ನಿಮ್ಮ ಈ ಜಿಜ್ಞಾಸೆ ಮಗನ ಕಿವಿಗೆ ಬಿದ್ದರೆ ಏನು ಪರಿಣಾಮವಾದೀತೆಂದು ಕಲ್ಪಿಸಿದ್ದೀರಾ? ಈ ಹುಚ್ಚು ಯೋಚನೆ ಬಿಟ್ಟು ಮಗನನ್ನು ನಿರ್ವ್ಯಾಜ್ಯವಾಗಿ ಸ್ವೀಕರಿಸುವುದನ್ನು ಕಲಿಯಿರಿ!

**ಪ್ರ** ಗಂಡು, 17 ವರ್ಷ. ನನ್ನ ಶಿಶ್ನದ ಕೆಳಭಾಗದಲ್ಲಿ ಚರ್ಮ ಸಡಿಲಾಗಿ ಹೊಲಿಗೆ ಹಾಕಿದಂತಿದೆ. ನಿಮಿರಿದಾಗ ಚರ್ಮ ಕೆಳಗೆ ಬರುತ್ತದೆ. ಚಿಕ್ಕವನಿದ್ದಾಗ ಆಪರೇಶನ್ ಆಗಿದೆ ಎಂಬ ಸಂದೇಹ ಇದೆ. ಮನೆಯಲ್ಲಿ ಕೇಳಲು ಮುಜುಗರ. ನನಗೆ ತುಂಬಾ ಭಯವಾಗಿದೆ. ಪರಿಹಾರ ತಿಳಿಸಿ.

ಯಾವುದೇ ಶಸ್ತ್ರಚಿಕಿತ್ಸೆಯಿಂದ ಹೆಚ್ಚಿನ ಚರ್ಮ ತೆಗೆಯಬಹುದೇ ಹೊರತು ಇರುವ ಚರ್ಮ ಹೆಚ್ಚಿಸಲು ಸಾಧ್ಯವಿಲ್ಲವಲ್ಲ? ನಿಮ್ಮ ಶಿಶ್ನದ ಮುಂದೊಗಲು ಹೆಚ್ಚಿಗಿರುವುದರಿಂದ ಹೀಗೆ ಕಾಣುತ್ತಿದೆಯಷ್ಟೆ. ಇದರಲ್ಲೇನೂ ದೋಷವಿಲ್ಲ. ಜನನಾಂಗಗಳ ಮಾಹಿತಿಯ ಕೊರತೆಯೇ ನಿಮ್ಮ ತಪ್ಪು ತಿಳುವಳಿಕೆಗೆ ಕಾರಣವೆಂದು ತೋರುತ್ತಿದೆ. ಆದುದರಿಂದ ಇಲ್ಲದ ಯೋಚನೆ ಬಿಟ್ಟು ಹಾಯಾಗಿರಿ. ಇಷ್ಟಕ್ಕೂ ಸಮಾಧಾನವಾಗದಿದ್ದರೆ ನಿಮ್ಮ ಕುಟುಂಬ ವೈದ್ಯರ ಹತ್ತಿರ ತೋರಿಸಿಕೊಂಡು ಎಲ್ಲವೂ ಸರಿಯಾಗಿದೆ ಎಂಬ ಭರವಸೆ ಪಡೆದುಕೊಳ್ಳಿ.

ಹಿರಿಯರಾದ ನಾವೆಲ್ಲ ತಿಳಿದುಕೊಳ್ಳಬೇಕಾದ ಲೈಂಗಿಕತೆಯ ಮೌಲ್ಯ ಇಲ್ಲಿದೆ: ಮಕ್ಕಳು ನಂಬಿಕೆಗೆ ಪಾತ್ರರಾದ ಹಿರಿಯರ ಜತೆಗೆ ಲೈಂಗಿಕತೆ ಬಗ್ಗೆ ಮುಕ್ತವಾಗಿ ಚರ್ಚೆ ಮಾಡುತ್ತಿದ್ದರೆ ವ್ಯಕ್ತಿಗೂ ಸಮಾಜಕ್ಕೂ ಲಾಭವಿದೆ!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ